ಕೊಂಡು ಇದರ ಮೇಲೆ ಸಾಕಷ್ಟು ತೀರ್ಮಾನವಾಗದೇ ಇರುವಂತೆ ಮಾಡುತ್ತಿದ್ದಾರೆಂದು ಅನೇಕ ದೂರುಗಳು ಬಂದಿವೆ. ಇಂತಹ ಕೆಲವಾರು ಸೊಸೈಟಿಗಳು ನಮ್ಮಲ್ಲಿವೆ ಇದನ್ನು ಸರಿಯಾಗಿ ತನಿಖೆ ಮಾಡಲು ಸರಕಾರಕ್ಕೆ ಆಗುವುದಿಲ್ಲ ಎನ್ನುವ ಅಭಿಪ್ರಾಯಗಳೂ ಬರುತ್ತಿವೆ. ಇದನ್ನು ಸರಕಾರ ಗಮನಿಸಿದೆಯೇ ?

ಶ್ರೀ ಎ. ಶಂಕರ ಆಳ್ವಾ.—ಇದು ತಪ್ಪು ಅಭಿಪ್ರಾಯ, ಇವನ್ನೆಲ್ಲಾ ಪೂರ್ಣವಾಗಿ ತನಿಖೆ ಮಾಡಿ ನೋಡುತ್ತಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ನಮಗೆ ಈ ಸೊಸೈಟಿ ಚೆನ್ನಾಗಿ ನಡೆಯಬೇಕು ಎಂದು ಇರುವುದು ಮತ್ತು ಇದರಲ್ಲಿ ಯಾರ ಪ್ರಭಾವದ ಪ್ರಶ್ನೆಯೂ ಬರಬಾರದು. ಎರಡನೇದು ಇದಕ್ಕೆ ಸಂಬಂಧಪಟ್ಟ ದೂರುಗಳು ಬಂದಿರುವಾಗ ಇದರ ಬಗ್ಗೆ ನ್ಯಾಯವಾಗಿ ಇಲ್ಲಿರುವ ವಿವರುಗಳಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ ಮತ್ತು ಬೇಗನೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಆಶ್ವಾಸನೆಯನ್ನೂ ಸರಕಾರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎ. ಶಂಕರ ಆಳ್ವಾ.—ನಾನಾಗಲೇ ಹೇಳಿದ ಹಾಗೆ ತನಿಖೆಗಾಗಿ ಏರ್ಪಾಡು ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಡೆಪ್ಯುಟಿ ರಿಜಿಸ್ಟ್ರಾರ್‌ರವರು ತನಿಖೆ ಮಾಡುತ್ತಿದ್ದಾರೆ.

ಶ್ರೀ ಜಿ. ರಾಮೇಗೌಡ — ಇದೇ ತರಹ ದೊಡ್ಡಬಳ್ಳಾಪುರದಲ್ಲಿ ಒಂದು ಸೊಸೈಟಿ ಇದೆ, ಇದನ್ನು ಸೂಪರ್‌ಸೀಡ್ ಮಾಡಿ ಇದರಲ್ಲಿ ಏನು ಅವ್ಯವಸ್ಥೆಗಳಾಗಿವೆ ಅದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೂ ಇದುವರೆಗೂ ಯಾವ ಕಾರ್ಯಕ್ರಮವನ್ನೂ ಏಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ಎ. ಶಂಕರ ಆಳ್ವಾ.—ತಾವು ಹೇಳಿದಂತೆ ಅಲ್ಲಿನ ರಿಕಾರ್ಡುಗಳನ್ನು ತರಿಸಿ ನೋಡಿ ತನಿಖೆ ಮಾಡಿ ಸೂಪರ್‌ಸೀಡ್ ಮಾಡುವ ಅಗತ್ಯ ಇದ್ದರೆ ಅದನ್ನೂ ಮಾಡುತ್ತೇನೆ.

REPAIRS TO PRIMARY SCHOOL BUILDINGS IN KARWAR TOWN

916. Sri VIRUPAKSH M. GHADI (Haliyal).—

Will the Minister for Education be pleased to state :—

(*a*) whether it is a fact that no current repairs including monsoon repairs were effected to the primary schools lying within the limits of the Karwar Town since these primary schools were taken over by Government from ex-District School Board;

(*b*) whether it is a fact that the Bai Kuvor Bai Marathi Primary School for Girls in Karwar Town is in a dilapidated condition and is likely to collapse for want of repairs;

(*c*) whether Government has received any representation about this matter;

(*d*) if so, the steps the Government intends to take in the matter?

Sri A. R. BADARINARAYANA (Minister for Education).—

(*a*) Yes.

(*b*) Yes.

(*c*) Yes.

(*d*) The question of entrusting the work of repairs to the school buildings in Municipal areas of Bombay Karnataka area to the Public Works Department is under active consideration of Government.

Meanwhile, the Deputy Commissioner, Karwar has already taken action to get urgent repairs done through the Municipalities.

ಶ್ರೀ ವಿ. ಎಂ. ಘಾಡಿ.— (ಡಿ) ಗೆ ಉತ್ತರವಾಗಿ ಇದು ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳಲಾಗಿದೆ, ಆದರೆ ಇದುವರೆಗೂ ಪಿ. ಡಬ್ಲ್ಯು. ಡಿ. ಯವರು ಈ ಶಾಲೆಗಳ ರಿಪೇರಿಯನ್ನು ಮಾಡಲಿಲ್ಲ. ಮಳೆಗಾಲ ಪುರು ಆಗುವುದರಲ್ಲಿದೆ ಮತ್ತು ಕೆಲವು ಕಡೆ ಇರುವ ಶಾಲೆಗಳ ಗೋಡೆಗಳು ಕುಸಿಯುವುದರಲ್ಲಿವೆ, ಇದರ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಂಡು ಬೇಗನೆ ರಿಪೇರಿ ಮಾಡಿಸುತ್ತೀರಾ?

†ಶ್ರೀ ಎ. ಆರ್. ಬದರೀನಾರಾಯಣ.—ಇದನ್ನು ಬೇಗನೆ ಮಾಡಬೇಕೆನ್ನುವುದೇ ಸರಕಾರದ ಆಸೆ. ಆದರೆ ಇದರಲ್ಲೇನಾಗಿದೆ ಎಂದರೆ ಪಿ. ಡಬ್ಲ್ಯು. ಡಿ. ಯವರು ರಿಪೇರಿ ಮಾಡಲು ಇದರ ಕಟ್ಟಡಗಳನ್ನೂ ಮುನಿಸಿಪಾಲಿಟಿಯವರು ಇನ್ನೂ ಪಿ. ಡಬ್ಲ್ಯು. ಡಿ. ಇಲಾಖೆಗೆ ಅಧಿಕೃತವಾಗಿ ವಹಿಸಿಕೊಟ್ಟಿಲ್ಲ. ಇದರಿಂದಾಗಿ ಇಲ್ಲಿ ರಿಪೇರಿ ಕೆಲಸಗಳನ್ನು ಮಾಡುವುದು ಕಷ್ಟವಾಗಿದೆ, ತಾವು ಹೇಳಿದಂತೆ ಕೆಲವು ಶಾಲೆಗಳ ಕಟ್ಟಡಗಳು ಬಹಳ ಕಷ್ಟ ಪರಿಸ್ಥಿತಿಯಲ್ಲಿವೆ ಅದನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಒಂದು ಮರಾಠಿ ಶಾಲೆ ಕಳೆದ ನೂರು ವರ್ಷಗಳಿಂದಲೂ ರಿಪೇರಿನೇ ಆಗಿಲ್ಲ ಎಂದೂ ನನಗೆ ತಿಳಿದು

ಬಂದಿದೆ. ಅದಕ್ಕಾಗಿ ಎಮರ್ಜೆಂಟಾಗಿ ಇಲ್ಲಿನ ಡಿಪ್ಯೂಟಿ ಕಮಿಷನರವರಿಗೆ ಸೂಚನೆ ಕೊಡಲಾಗಿದೆ, ಅವರೇ ಮುನಿಸಿಪಾಲಿಟಿ ಕಡೆಯಿಂದ ಇದನ್ನು ತೆಗೆದುಕೊಂಡು ರಿಪೇರಿ ಮಾಡಿದನಂತರ ಇದಕ್ಕೆ ತಗಲುವ ಖರ್ಚನ್ನು ಅವರಿಗೆ ರೀ ಇಂಬರ್ಸ್ ಮಾಡಿಕೊಡ ಬೇಕೆಂದೂ ಹೇಳಲಾಗಿದೆ. ಅವರು ಬೇಗ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆಗಳನ್ನೂ ಈಗಾಗಲೇ ಕೊಡಲಾಗಿದೆ.

ಶ್ರೀ ವಿ. ಎಂ. ಘಾಡಿ.—ಮುನಿಸಿಪಾಲಿಟಿಯವರು ಇನ್ನೂ ಕಟ್ಟಡಗಳನ್ನು ವಹಿಸ ಲಿಲ್ಲ ಎಂದು ಸರಕಾರ ಇದರ ರಿಪೇರಿ ಕೆಲಸಗಳನ್ನು ಮಾಡದೇ ಇದ್ದರೆ ಇಲ್ಲಿನ ಶಾಲೆಗಳ ಸ್ಥಿತಿ ದಿನೇ ದಿನೇ ಕೆಡುತ್ತಿದೆ ಎಂದು ನೀವೇ ಒಪ್ಪಿಕೊಂಡಿದ್ದೀರಿ. ಇದರ ಬಗ್ಗೆ ಸರಕಾರವೇ ನೇರವಾಗಿ ಬೇಗ ತಕ್ಕ ರಿಪೇರಿ ಕೆಲಸಗಳನ್ನೇಕೆ ಮಾಡಬಾರದು ?

ಶ್ರೀ ಎ. ಆರ್. ಬದರೀನಾರಾಯಣ.—ಪಿ. ಡಬ್ಲ್ಯು. ಡಿ. ಯವರೇ ರಿಪೇರಿ ಕೆಲಸ ಮಾಡಲು ಅವರ ಚಾರ್ಜಿಗೆ ಇಲ್ಲಿನ ಕಟ್ಟಡಗಳು ಬಂದಿಲ್ಲ. ಇದಕ್ಕಾಗಿ ಡಿಪ್ಯೂಟಿ ಕಮಿಷನರವರ ಮೂಲಕ ಮಾಡಿಸಬೇಕೆಂದು ಈಗಾಗಲೇ ಡಿಪ್ಯೂಟಿ ಕಮಿಷನರ್‌ರವ ರನ್ನು ಪ್ರಾರ್ಥನೆ ಮಾಡಿದ್ದೇವೆ. ಅವರು ಈಗ ಬೇಗನೆ ಮಾಡುತ್ತಾರೆ. ಪಿ. ಡಬ್ಲ್ಯು. ಡಿ. ಯವರು ತೆಗೆದುಕೊಳ್ಳುವುದರ ಬಗ್ಗೆ ಇನ್ನೂ ಪತ್ರವ್ಯವಹಾರದಲ್ಲೇ ಇದೆ, ಇದಕ್ಕೆ ಫೈನಾನ್ಸ್ ಇಲಾಖೆ ಒಪ್ಪಿಗೆ ಬೇಕು, ಇದರಿಂದಾಗಿ ಇಲ್ಲಿ ಸ್ವಲ್ಪ ನಿಧಾನವಾಗುತ್ತಿದೆ.

ಶ್ರೀ ಸಿ. ಬೈರೇಗೌಡ.—ಪರಿಸ್ಥಿತಿ ಕೆಟ್ಟಿದೆ ಎಂದು ನೀವೇ ಹೇಳುವಾಗ ಇದರ ಬಗ್ಗೆ ತೀವ್ರವಾಗಿ ಏಕೆ ಕ್ರಮ ತೆಗೆದುಕೊಳ್ಳಬಾರದು ?

ಶ್ರೀ ಎ. ಆರ್. ಬದರೀನಾರಾಯಣ.—ಈಗಾಗಲೇ ಡಿಪ್ಯೂಟಿ ಕಮಿಷನರ್‌ರವ ರಿಗೆ ಸೂಚನೆಗಳನ್ನು ಕೊಡಲಾಗಿದೆ ಮತ್ತು ತಕ್ಷಣ ಮಾಡಬೇಕೆಂದೂ ಅವರಿಗೆ ಹೇಳಲಾಗಿದೆ.

Sri B. B. SAYANAK.—Government have taken over all these Municipal Schools five years' back. Since then there have been no repairs to those buildings. The Minister has stated that the question of entrusting the work of repairs to the Municipal School buildings to the P. W. D., is under active consideration of the Government. Five years lapsed long time back. Is not 5 years sufficient time.

Sri A. R. BADARINARAYANA.— It is not only for these 5 years. Throughout the Municipal administration those buildings have not been touched. Some formalities are there. The Local Authorities have to hand over the buildings to the PWD.

ಇದರ ಬಗ್ಗೆ ಪತ್ರವ್ಯವಹಾರಗಳು ಕಳೆದ ನಾಲ್ಕು ವರ್ಷಗಳಿಂದ ಆಗುತ್ತಲಿವೆ, ಇದಕ್ಕಾಗಿ ಬೇಗನೆ ಹ್ಯಾಂಡ್ ಓವರು ಮಾಡಬೇಕೆಂದು ಅವರನ್ನು ಕೇಳುತ್ತಿದ್ದೇನೆ.

ಶ್ರೀ ವಿ. ಎಂ. ಫಾಡಿ.— ಈಗಾಗಲೇ ನಾನು ಹೇಳಿದಂತೆ ಈ ಶಾಲೆಗಳಲ್ಲದೆ ಹಳ್ಳಿಗಳಲ್ಲಿರುವ ಶಾಲಾ ಕಟ್ಟಡಗಳ ಸ್ಥಿತಿಯೂ ಇದೇ ರೀತಿಯಾಗಿದೆ, ಇದರ ಬಗ್ಗೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.— ಇದರಲ್ಲಿ ಮುನಸಿಪಾಲಿಟಿಯಿಂದ ಈ ಬಿಲ್ಡಿಂಗುಗಳನ್ನು ಟೇಕ್ ಓವರು ಮಾಡಬೇಕಾಗಿದೆ. ಇದಕ್ಕೆ ಮಾನ್ಯ ಸದಸ್ಯರ ಸಹಕಾರವೂ ಬೇಕಾಗಿದೆ, ತಾವೂ ಕೂಡ ಮುನಿಸಿಪಾಲಿಟಿಯವರಿಗೆ ಹೇಳಿ ಬೇಗನೆ ಮಾಡಿಸಬೇಕು, ನಾವು ಕೂಡ ಆದಷ್ಟು ಜಾಗ್ರತೆ ಇಲ್ಲಿನ ರಿಪೇರಿ ಕೆಲಸಗಳನ್ನು ಮಾಡಬೇಕೆಂದೂ ಇದೆ. ಹಳ್ಳಿಗಾಡಿನ ಶಾಲೆಗಳ ಪರಿಸ್ಥಿತಿಯೂ ಇದೇ ರೀತಿ ಇದೆ ಎಂದರು. ಇದನ್ನೂ ಆದಷ್ಟು ಜಾಗ್ರತೆ ರಿಪೇರಿ ಮಾಡಲು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು—. ಈಗ ಪ್ರಶ್ನೋತ್ತರ ವೇಳೆಯಾಯಿತು.

Questions for Answers on the Day (but not taken up)

ELECTION OF THE PRESIDENT, T. A. P. C. M. S., T. NARASIPUR

571. Sri K. MADE GOWDA (Bannur).—

Will the Minister for Co-operation be pleased to state:—

(*a*) the date on which the election of the present President of T. Narasipur T. A. P. C. M. Society; was held;

(*b*) whether it is a fact that there was a stay order by the Honorary Arbitrator on the day of election to the effect that the election of the President should not be held;

(*c*) whether it has come to the notice of the Government that the election was conducted eventhough there was stay order for conducting the election;

(*d*) if so, the action taken by the Government in this behalf ?

Sri A. SHANKARA ALVA (Minister for Co-operation).—

(*a*) 20th April 1970.

(*b*) Yes.

V-,31N73
N74 -17-1-4